
## ಪದಬಂಧ



**ಎಡದಿಂದ ಬಲಕ್ಕೆ**

1. ಅಧಿನಿಯಮಗಳನ್ನೆಲ್ಲ ಕುರಿತ ಗಾಢ ವ್ಯಾಸಂಗ 4
3. ವ್ಯಾಪಕ ಪರಿಣಾಮ ಬೀರಲಿದೆ ಪ್ರಕೃತಿಯ ಈ ಮುನಿಸು 3
4. ವಿತರಣಾ ಕಾರ್ಯವನ್ನು ಕೈಗೊಂಡಿರುವವ ಒಬ್ಬ ವ್ಯಾಪಾರಿ 3
6. ವ್ಯಾಕರಣ ಶಾಸ್ತ್ರದಲ್ಲಿ ಭಾರೀ ವಿದ್ವಾಂಸನಾಗಬೇಕೆಂಬ ಒಂದು ಕನಸು 4
7. ನೆಲ ಹಳತಾದರೇನು? ಗಟ್ಟಿ ಅಡಿಪಾಯ ಬೇಕಷ್ಟೆ 4
9. ಕಕ್ಷೆಯಲ್ಲಿ ನಿರ್ಮಿಸಲಾದೀತೇ ಒಂದು ದೇವತಾ ಪ್ರಪಂಚ? 4
12. ಇಂಥ ಕಾಳಗಕ್ಕೆ ಕಾರಣವಾದದ್ದು ಕಪ್ಪು ದುಡ್ಡು 4
14. ವಾರ್ತಾ ವಾಚಕನಾಗಿದ್ದವ ಮೋಸಗಾರನಾದಾನೇ? 3
15. ಕಳ್ಳರಿಂದ ಮಾಡಿಸಿದ ಕೆಲಸ ಎಂಬುದೇ ಮುಖ್ಯ ದೋಷ 3
16. ತೆರಿಗೆ ಕಟ್ಟುವಲ್ಲೆಲ್ಲ ಹರಡಿಹೋಗಿದೆ ಒಣಗಿಹೋದ ಪರ್ಣ 4

**ಮೇಲಿನಿಂದ ಕೆಳಕ್ಕೆ**

1. ಪರಿಕರಗಳನ್ನೆಲ್ಲ ಹಾಳುಗೆಡಹಿದ್ದು ಆತ ಮಾಡಿದ ದ್ರೋಹ 4
2. ಅಷ್ಟೂ ವನಿತೆಯರು ಒಟ್ಟುಗೂಡಿ ಕಡೆದು ತೆಗೆದದ್ದು ಬೆಣ್ಣೆ 4
3. ವೇದಾಭ್ಯಾಸವನ್ನು ಮಾಡಲೂ ಒಂದು ವಿಶಿಷ್ಟ ಕ್ರಮ ಇದೆ 3
5. ಸದಾ ಕಾಲಹರಣ ಮಾಡುತ್ತಾನೆಂದು ಹೀಗೊಂದು ಜಗಳ 3
6. ಆ ಕಲ್ಲಿನ ಮೇಲೆ ಎಲ್ಲೆಲ್ಲೂ ಕೆತ್ತನೆಗಳೇ ತುಂಬಿವೆ 4
8. ಅವನ ದುಷ್ಟತನವನ್ನು ದಮನ ಮಾಡಲು ಧೈರ್ಯ ಬೇಕು 4
10. ಕಣ್ಣೆವೆಯಿಕ್ಕುವ ಕೆಲಸ ಅದೆಷ್ಟು ಅಲ್ಪ ಕಾಲದ್ದು? 3
11. ಇಷ್ಟು ಸುಂದರ ಕುಲಾವಿಯನ್ನು ಹೊಲಿದಾತ ವಿದ್ವಾಂಸನೇ ಇರಬೇಕು 4
12. ಕಷ್ಟಕರವಲ್ಲವೇ ಮರದಲ್ಲಿ ಗೊಂಬೆಯನ್ನು ಕಡೆಯುವ ಲಲಿತ ವಿದ್ಯೆ? 4
13. ಧ್ಯಾನ ಕಾರ್ಯಕ್ಕೆ ತಕ್ಕವನಲ್ಲ ಬಿಡಿ ಈ ಶ್ರೀಮಂತ 3

---

### 24–07–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅವಾಂತರ 3. ಚಾರಣ 4. ಜಾನಕಿ 6. ಪರಿಕರ 8. ಪರಕೀಯ 10. ನವೋದಯ 12. ಸಹಮತ 16. ಯಜನ 17. ಮಸುಕು 18. ಕನಿಕರ

**ಮೇಲಿನಿಂದ ಕೆಳಕ್ಕೆ**


1. ಅಣಕ 2. ರಜಾಯಿ 3. ಚಾಲಕ 5. ಕಿಶೋರ 6. ಪಲಾಯನ 7. ರತ್ನತ್ರಯ 8. ಪರಿಹಾಸ 9. ಯಥೋಚಿತ 11. ದಡಿಯ 13. ಹರಕು 14. ಪಾನಕ 15. ಡಾಮರ

**ಪ್ರಶ್ನಾಂಕಣ**

# ಅತಿ ದೊಡ್ಡ ಮೆದುಳಿನ ಪ್ರಾಣಿ ಯಾವುದು?

ಮನುಷ್ಯರೂ ಸೇರಿದಂತೆ ಸಕಲ ವಿಧ ಪ್ರಾಣಿಗಳಲ್ಲೂ ಬುದ್ಧಿವಂತಿಕೆಗೆ, ಗ್ರಹಣ ಶಕ್ತಿಗೆ, ನೆನಪಿನ ಸಾಮರ್ಥ್ಯಕ್ಕೆ, ಜ್ಞಾನೇಂದ್ರಿಯಗಳ ಸೂಕ್ಷ್ಮತೆಗೆ, ಅಂಗಾಂಗಗಳ ಚಟುವಟಿಕೆಗಳಿಗೆ ಇತ್ಯಾದಿ ಎಲ್ಲಕ್ಕೂ ಮೂಲವಾದ ಅಂಗ ಮೆದುಳೇ ತಾನೇ? ಸಾಮಾನ್ಯವಾಗಿ ಪ್ರಾಣಿಗಳ ಶರೀರ ತೂಕ ಮತ್ತು ಅವುಗಳ ಮೆದುಳಿನ ತೂಕ ಇವೆರಡೂ ನೇರವಾಗಿ ಸಂಬಂಧಿಸಿವೆ. ಹಾಗೆಂದರೆ, ಪ್ರಾಣಿಗಳ ತೂಕಗಾತ್ರಗಳು ಹೆಚ್ಚು ಹೆಚ್ಚು ಇದ್ದಷ್ಟೂ ಅವುಗಳ ಮೆದುಳಿನ ಗಾತ್ರವೂ ಹೆಚ್ಚು ಹೆಚ್ಚು ಆಗಿರುತ್ತದೆ. ಉದಾಹರಣೆಗೆ 5 ಮಿಲಿ ಗ್ರಾಂ ತೂಕದ ಇರುವೆಯ ಮೆದುಳು 0.3 ಮಿಲಿ ಗ್ರಾಂ ತೂಗುತ್ತದೆ (1000 ಮಿಲಿ ಗ್ರಾಂ=1 ಗ್ರಾಂ). 500 ಗ್ರಾಂ ತೂಕ ಇರುವ ಕಾಗೆಯ ಮೆದುಳಿನ ತೂಕ 8 ಗ್ರಾಂ; 50 ಕಿಲೋ ತೂಕದ ಚಿಂಪಾಂಜಿಯ ಮೆದುಳಿನ ತೂಕ 420 ಗ್ರಾಂ; 60 ಕಿಲೋ ತೂಗುವ ಮನುಷ್ಯನ ಮೆದುಳಿನ ತೂಕ 1.4 ಕಿಲೋ ಗ್ರಾಂ; 5 ಟನ್ ತೂಗುವ ಆನೆಯ ಮೆದುಳಿನ ತೂಕ 4.8 ಕಿಲೋ ಗ್ರಾಂ; 45 ಟನ್ ತೂಗುವ ಸ್ಪರ್ಮ್ ತಿಮಿಂಗಿಲದ (ಚಿತ್ರ 2) ಮೆದುಳಿನ ತೂಕ 9 ಕಿಲೋ! ಇದಕ್ಕೆ ಕೆಲವು ಅಪವಾದಗಳೂ ಇವೆ.

ಹಾಗೆಂದರೆ ಕೆಲ ದೊಡ್ಡ ಗಾತ್ರದ ಪ್ರಾಣಿಗಳು ತಮಗಿಂತಲೂ ಚಿಕ್ಕ ಗಾತ್ರದ ಪ್ರಾಣಿಗಳ ಮೆದುಳಿಗಿಂತಲೂ ಕಡಿಮೆ ತೂಕದ ಮೆದುಳನ್ನು ಪಡೆದಿವೆ. ಉದಾಹರಣೆಗೆ 10 ಕಿಲೋ ತೂಕದ ಅಷ್ಟಪದಿಯ ಮೆದುಳಿನ ತೂಕ ಕೇವಲ 1.2 ಗ್ರಾಂ; 40 ಕಿಲೋ ತೂಗುವ ಚಕ್ರವರ್ತಿ ಪೆಂಗ್ವಿನ್‌ನ (ಚಿತ್ರ3) ಮೆದುಳಿನ ತೂಕ 45 ಗ್ರಾಂ; 150 ಟನ್ ತೂಗುವ ನೀಲಿ ತಿಮಿಂಗಿಲದ ಮೆದುಳಿನ ತೂಕ 7 ಕಿಲೋಗ್ರಾಂ.




ಅದೆಲ್ಲ ಏನೇ ಇದ್ದರೂ ಧರೆಯ ಇಡೀ ಪ್ರಾಣಿವರ್ಗದಲ್ಲಿ ಅತ್ಯಂತ ದೊಡ್ಡ ಮೆದುಳಿನ ದಾಖಲೆ ಸ್ಪರ್ಮ್ ತಿಮಿಂಗಿಲದ್ದು; ಅದರ ಮೆದುಳಿನ ತೂಕ 9 ಕಿಲೋಗ್ರಾಂ! ಆದರೆ ಅತ್ಯಂತ ದೊಡ್ಡ ಮೆದುಳಿನ ಪ್ರಾಣಿಯನ್ನು ಮೆದುಳಿನ ನೇರ ತೂಕದ ಆಧಾರದ ಮೇಲೆ ನಿರ್ಧರಿಸುವುದನ್ನು ಬಹಳ ಜನ ವಿದ್ವಾಂಸರು ಒಪ್ಪುವುದಿಲ್ಲ. ಅವರ ಪ್ರಕಾರ ದೇಹದ ತೂಕಕ್ಕೆ ಹೋಲಿಸಿದಂತೆ ಮೆದುಳಿನ ತೂಕವನ್ನು ನಿರ್ಧರಿಸಬೇಕು. ಆ ಪ್ರಕಾರ ಲೆಕ್ಕಿಸಿದರೆ ಇರುವೆಯ ಮೆದುಳಿನ ತೂಕ ಅದರ ಶರೀರ ತೂಕದ ಶೇಕಡ 5.88 ಆಗುತ್ತದೆ; ಮನುಷ್ಯರ ಮೆದುಳಿನ ತೂಕ ಅವರ ಶರೀರ ತೂಕದ ಶೇಕಡ 2.3; ಕಾಗೆಯ ಮೆದುಳಿನ ತೂಕ ಅದರ ಶರೀರ ತೂಕದ ಶೇಕಡ 1.6; ಆನೆಯ ಮೆದುಳು ಅದರ ದೇಹದ ಶೇಕಡ 0.96; ಚಿಂಪಾಂಜಿಯ ಮೆದುಳಿನ ತೂಕ ಅದರ ದೇಹ ತೂಕದ ಶೇಕಡ 0.83 ಮತ್ತು ಸ್ಪರ್ಮ್ ತಿಮಿಂಗಿಲದ ಮೆದುಳಿನ ತೂಕ ಅದರ ಶರೀರದ ಶೇಕಡ 0.17ರಷ್ಟು ಆಗುತ್ತದೆ.

ಈ ಕ್ರಮವನ್ನು ಅನುಸರಿಸಿದರೆ ಅತ್ಯಂತ ದೊಡ್ಡ ಗಾತ್ರದ ಮೆದುಳಿನ ಪ್ರಾಣಿ ಇರುವೆಯೇ ಆಗುತ್ತದೆ!

**■ ಎನ್. ವಾಸುದೇವ್**